ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

ಸಿ.ಸಿ. ಸಂಖ್ಯೆ: **123/2023**

| | |
|---|---|
| ಫಿರ್ಯಾದಿದಾರ | ಕೃಷ್ಣ ಆರ್**.** ಬಿನ್ ಲೇಟ್ ರಾಜು**,**<br>ಸುಮಾರು **39** ವರ್ಷ ವಯಸ್ಸು**,**<br>ವಾಸಃ ಮನೆ ನಂ**.622/22,**<br>ಹೊಸ ಮಾರುತಿ ಬಡಾವಣೆ**,** ಹುಣಸೂರು ನಗರ**,**<br>ಹುಣಸೂರು**.** |

**ವಿರುದ್ಧ,**

| | |
|---|---|
| ಆರೋಪಿ/ಗಳು | ಸುರೇಶ**,**<br>ಬಿನ್ ನಂಜುಂಡಯ್ಯ,<br>ವಯಸ್ಸು ಸುಮಾರು 40 ವರ್ಷ,<br>ವಾಸಃ ಸುಂದರಣ್ಣ ಲೇಔಟ್**,**<br>ಮಾರುತಿ ಬಡಾವಣೆ**,** ಹುಣಸೂರು ನಗರ**,**<br>ಹುಣಸೂರು**.** |

## ಆಪಾದನೆ

ಆರೋಪಿಯಾದ ನೀವು ಪಿರ್ಯಾದಿಯಿಂದ ಜೂನ್ 2022 ರಂದು ರೂ. 4,00,000/- ರೂಪಾಯಿಗಳನ್ನು ವಾಣಿಜ್ಯ ಕಟ್ಟಡವನ್ನು ಕಟ್ಟುವ ಉದ್ದೇಶಕ್ಕಾಗಿ ಸಾಲವಾಗಿ ಪಡೆದಿದ್ದು, ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು ನಂಃ381118 ದಿಃ 12.12.2022 ರಲ್ಲಿ ರೂ. 4,00,000-00 ಎಸ್.ಬಿ.ಐ ಬ್ಯಾಂಕ್, ಹುಣಸೂರು ಶಾಖೆಯ ಚೆಕ್ಕನ್ನು ನೀಡಿರುತ್ತೀರಿ. ಸದರಿ ಚೆಕ್ಕನ್ನು ಪಿರ್ಯಾದುದಾರನು ತನ್ನ ಖಾತೆ ಹೊಂದಿರುವ, ಇಂಡಿಯನ್ ಓವರಸಿಸ್ ಬ್ಯಾಂಕ್, ಕಟ್ಟೆಮಳಲವಾಡಿ ಶಾಖೆಗೆ ನಗಧೀಕರಣಕ್ಕೆ ಸಲ್ಲಿಸಿದ್ದು ಸದರಿ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ. ಈ ಬಗ್ಗೆ ದಿಃ 22.12.2022 ರಂದು ತಮಗೆ ನೋಟಿಸ್ ನೀಡಿದ್ದು ಅದು ನಿಮಗೆ ಜಾರಿಯಾಗಿರುತ್ತದೆ. ನೀವು ಹಣ ನೀಡದೇ ವಿಫಲರಾಗಿರುತ್ತೀರಿ. ಆದ್ದರಿಂದ ನೀವು ಕಲಂ 138 ಎನ್.ಐ ಆಕ್ಟ್ ಅಡಿಯಲ್ಲಿ ಅ ಪರಾಧ ಎಸಗಿರುತ್ತೀರಿ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ
ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ03-07-2023

**(**ಮನು ಪಟೇಲ್ ಬಿ**.**ವೈ**,)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ದಂಡಾಧಿಕಾರಿಗಳು**,** ಹುಣಸೂರು